**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.**

**ಸಿ.ಸಿ. ಸಂಖ್ಯೆ.81/2025**

| | | | |
|---|---|---|---|
| ಸಾಕ್ಷಿದಾರರ ಹೆಸರು | ರಂಗೇಗೌಡ | ಸಿ.ಡಬ್ಲ್ಯೂಃ 12 | ಪಿ.ಡಬ್ಲ್ಯೂಃ 6 |
| ತಂದೆಯ ಹೆಸರು | ಮೂಡ್ಲೇಗೌಡ | | |
| ವಯಸ್ಸು | 52 ವರ್ಷ | | |
| ಉದ್ಯೋಗ | ಎ.ಎಸ್.ಐ, ಗೋಣಿಬೀಡು ಪೊಲೀಸ್ ಠಾಣೆ | | |
| ವಾಸ ಸ್ಥಳ | ಗೋಣಿಬೀಡು | | |

ದಿನಾಂಕಃ 19.08.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದಃ**

1. ನಾನು ದಿಃ 24.02.2024 ರಿಂದ ಇಲ್ಲಿಯವರೆಗೂ ನಾನು ಗೋಣಿಬೀಡು ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ನಾನು ದಿಃ 15.01.2025 ರಂದು ಠಾಣಾ ಎಸ್.ಹೆಚ್.ಒ ಆಗಿ ಕರ್ತವ್ಯ ನಿರ್ವಹಿಸುತ್ತಿರುವಾಗ ಸಂಜೆ 7.25 ರ ಸುಮಾರಿಗೆ ಚಾಸಾ.1 ರವರು ನೀಡಿದ ವರದಿಯನ್ನು ಚಾಸಾ.2 ರವರಿಂದ ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 3/2025 ರಂತೆ ಪ್ರಕರಣವನ್ನು ದಾಖಲು ಮಾಡಿರುತ್ತೇನೆ. ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ನಿ.ಪಿ.14 ಎಂದು ಗುರುತಿಸಲಾಯಿತು. ನಂತರ ಈ ಕೇಸಿನ ಕಡತವನ್ನು ಚಾಸಾ.13 ರವರಿಗೆ ವಹಿಸಿಕೊಟ್ಟಿರುತ್ತೇನೆ.

<u>ಪಾಟೀ ಸವಾಲು ಶ್ರೀ ಹೆಚ್.ಕೆ.ಡಿ ವಕೀಲರಿಂದ – ಆರೋಪಿತನ ಪರವಾಗಿ</u>

3. ದಿಃ 15.01.2025 ರಂದು ನಾನು ಠಾಣಾ ಎಸ್.ಹೆಚ್.ಒ ಆಗಿದ್ದೆ ಎಂಬ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರು ಪಡಿಸಿಲ್ಲ. ನಾನು ಚಾಸಾ.2 ರವರಿಂದ ಯಾವುದೇ ವರದಿಯನ್ನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರ ಮಾತನ್ನು ಕೇಳಿಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ